**ಸಾಕ್ಷಿಯನ್ನು ದಿಃ 01.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ.ಬಿ. ವಕೀಲರಿಂದಃ-**

ವಡ್ಡಂಬಾಳು ಗ್ರಾಮದ ಕರೀಗೌಡರು ನನಗೆ ಗೊತ್ತಿಲ್ಲ, ನಾನು ಅವರನ್ನು ನೋಡಿಲ್ಲ. ಅವರ ಹೆಂಡತಿಯನ್ನು ನಾನು ನೋಡಿಲ್ಲ. ಕರೀಗೌಡರ ಹೆಂಡತಿಯ ಹೆಸರನ್ನು ನಾನು ತಿಳಿದುಕೊಂಡಿಲ್ಲ. ಕರೀಗೌಡರು ಮತ್ತು ಅವರ ಹೆಂಡತಿ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಕರೀಗೌಡರ ಮಕ್ಕಳು ತಿಮ್ಮೇಗೌಡ, ಪುಟ್ಟಲಕ್ಷ್ಮಮ್ಮ, ಸಾವಿತ್ರಮ್ಮ, ತುಳಸಮ್ಮ. ಕರೀಗೌಡರ ಮಗ , ಹೆಣ್ಣು ಮಕ್ಕಳು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಪುಟ್ಟಲಕ್ಷ್ಮಮ್ಮ, ಸಾವಿತ್ರಮ್ಮ, ತುಳಸಮ್ಮ ಅವರ ಮಕ್ಕಳುಗಳ ಹೆಸರುಗಳು ನನಗೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿ ಪುಟ್ಟಲಕ್ಷ್ಮಮ್ಮ, ಸಾವಿತ್ರಮ್ಮ, ತುಳಸಮ್ಮ ರವರ ಮಕ್ಕಳುಗಳ ಹೆಸರುಗಳನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಈ ದಾವೆಯನ್ನು ಯಾರು ಯಾರ ಮೇಲೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎಷ್ಟು ಸರ್ವೆ ನಂ., ಎಷ್ಟು ಖಾಲಿ ಜಾಗ, ಎಷ್ಟು ಮನೆಗಳ ಮೇಲೆ ದಾವೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾವ ಉದ್ದೇಶಕ್ಕಾಗಿ ಈ ದಾವೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪುಟ್ಟಲಕ್ಷ್ಮಮ್ಮನವರ ಹೆಸರಿನಲ್ಲಿ ಸರ್ವೆ ನಂ. 72/2 ರಲ್ಲಿ 2 ಎಕರೆ 23 ಗುಂಟೆ ಜಮೀನು ಇದೆ ಎಂದರೆ ಸರಿ, ಸರ್ವೆ ನಂ. 72/4 ರಲ್ಲಿ 24 ಗುಂಟೆ ಜಮೀನು ಇದೆ ಎಂದರೆ ಸರಿ. ಅದೆ ರೀತಿ ಪುಟ್ಟಲಕ್ಷ್ಮಮ್ಮ ಮತ್ತು ಅವರ ಕುಟುಂಬದ ಹೆಸರಿನಲ್ಲಿ ಸರ್ವೆ ನಂ. 45/1 ರಲ್ಲಿ 33 ಗುಂಟೆ, 45/2 ರಲ್ಲಿ 9 ಗುಂಟೆ, 45/3 ರಲ್ಲಿ 20 ಗುಂಟೆ, 74/2 ರಲ್ಲಿ 2 ಎಕರೆ 5 ಗುಂಟೆ ಮತ್ತು ವಡ್ಡಂಬಾಳು ಗ್ರಾಮದಲ್ಲಿ ಮನೆಗಳು, ಬ್ಯಾರನ್ ಮನೆಗಳು ಇದೆ, ಸರ್ವೆ ನಂ.ಗಳು ಗೊತ್ತಾಗುವುದಿಲ್ಲ ಎನ್ನುತ್ತಾರೆ. ಸದರಿ ಆಸ್ತಿಗಳನ್ನು ಹೇಗೆ ಯಾರು ತೆಗೆದುಕೊಂಡಿದ್ದರು ಎಂಬ ಬಗ್ಗೆ ನನಗೆ ಅನುಭೋಗವಿಲ್ಲ.

ನನಗೆ 1 ಎಕರೆ 20 ಗುಂಟೆ ಜಮೀನು ಇದ್ದು, ಅದು ನನ್ನ ತಾಯಿ ಹೆಸರಿಗೆ ಇದೆ. ಸರ್ವೆ ನಂ ಗೊತ್ತಿಲ್ಲ. ದಾವಾ ಜಮೀನಿನುಗಳ ಚೆಕ್ಕು ಬಂದಿ, ವಿಸ್ತೀರ್ಣ ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ವಾದಿಗಳು ಹೇಳಿ ನನ್ನನ್ನು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ, ಅದರೆ ಸಾಕ್ಷಿ ಹೇಳುವಂತೆ ಕರೆದುಕೊಂಡು ಬಂದಿದ್ದರು, ಕೇಸಿನ ಬಂಡವಾಳ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿ ಯಾರು ಎಂದು ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ**

3 ನೇ ಪ್ರತಿವಾದಿ ಏಕಪಕ್ಷಿಯ,

4 ರಿಂದ 8 ನೇ ಪ್ರತಿವಾದಿಗಳನ್ನು ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.